C.C. No. 652 -2021 PW-1

ದಿನಾಂಕಃ 07-06-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಪಾಟೀ ಸವಾಲು ಃ ಆರೋಪಿ ಪರವಾಗಿ ಶ್ರೀ. R.I.H ವಕೀಲರಿಂದಃ**

1. ನಮ್ಮ ಸಂಸ್ಥೆಯು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆಯಡಿ ನೋಂದಣಿಯಾಗಿರುತ್ತದೆ. ನೋಂದಣಿಯಾದ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದ್ರಿ ಪತ್ರದಲ್ಲಿ ಹಣಕಾಸಿನ ಕುರಿತಂತೆ ಬಡ್ಡಿ ದರವನ್ನು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಬೈಲಾದಲ್ಲಿ ನಮೂದಿಸಿರುತ್ತಾರೆ. ನಾವು ಎಷ್ಟು ಬಡ್ಡಿ ದರವನ್ನು ಹಾಕಬಹುದು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಆರೋಪಿಗೆ ನೀಡಿದ ಸಾಲದಲ್ಲಿ ಎಷ್ಟು ಹಣವನ್ನು ಠೇವಣಿಯಾಗಿ ಇಟ್ಟುಕೊಂಡಿರುತ್ತೇವೆ ಎಂದು ಪಿರ್ಯಾದಿನಲ್ಲಿ ನಮೂದಿಸಿಲ್ಲ ಎಂದರೆ ಸರಿ.

2. ಪ್ರಕರಣದ 10,000 ರೂಪಾಯಿ ಹಣವನ್ನು ಠೇವಣಿಯಾಗಿ ಇಟ್ಟುಕೊಂಡಿರುತ್ತೇವೆ. ಪ್ರತಿ ತಿಂಗಳು ಆರೋಪಿಯು ಎಷ್ಟು ಹಣವನ್ನು ತುಂಬಬೇಕೆಂದು ನಿಗದಿ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು 60 ತಿಂಗಳುಗಳ ಸಮಾನ ಕಂತುಗಳನ್ನು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. 60 ಕಂತುಗಳಲ್ಲಿ ಎಷ್ಟು ಅಸಲ ಹಣ ಹಾಗೂ ಎಷ್ಟು ಬಡ್ಡಿ ಹಣ ತುಂಬಬೇಕಾಗಿರುತ್ತದೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಪ್ರಕರಣವನ್ನು ದಾಖಲು ಮಾಡುವ ಮುಂಚಿತವಾಗಿ ಆರೋಪಿಯು 11,000-00 ಅಸಲು ಬಡ್ಡಿ 6,000-00 ರೂಪಾಯಿ ಹಣವನ್ನು ಬಡಿಜ್ಞಯಲ್ಲಿ ತುಂಬಿರುತ್ತಾರೆ. ಸದ್ರಿ ವಿಷಯವನ್ನು ದೂರಿನಲ್ಲಿ ನಮೂದಿಸಿಲ್ಲ. ಅದನ್ನು ಕಡಿತಗೊಳಿಸಿಯೇ ಪ್ರಕರಣವನ್ನು ಹೂಡಿರುತ್ತೇವೆ. ನೋಟೀಸ ನೀಡಿವಾಗ ಸದ್ರಿ ವಿಷಯವನ್ನು ನಮೂದಿಸಿಲ್ಲ.

3. ಠೇವಣಿ ಹಣವನ್ನು ಸಾಲದ ಮರುಪಾವತಿಗೋಸ್ಕರ 2024 ರಲ್ಲಿ ಜಮಾ ಮಾಡಿಕೊಂಡಿರುತ್ತೇವೆ. ಸದ್ರಿ ವಿಷಯವನ್ನು ಆರೋಪಿಗೆ ತಿಳಿಸಿಲ್ಲ. ಪ್ರಕರಣದಲ್ಲಿ 15% ಬಡ್ಡಿ, 2 % ದಂಡದ ಬಡ್ಡಿಯನ್ನು ವಿಧಿಸಿರುತ್ತೇವೆ. 2019 ರಲ್ಲಿ ಸ್ವಲ್ಪ ಹಣವನ್ನು ಮೊದಲಿಗೆ ಮರು ಪಾವತಿ ಮಾಡಿರುತ್ತಾರೆ. ತದನಂತರ ಮಾಡಿರುವುದಿಲ್ಲ. ಮರು ಪಾವತಿಗೋಸ್ಕರ ಆರೋಪಿಗೆ ಸಾದಾ ನೋಟೀಸನ್ನು ನೀಡಿರುತ್ತೇವೆ. ಸದ್ರಿ ನೋಟೀಸನ್ನು ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಅದು ನಮ್ಮ ಕಡತದಲ್ಲಿದ್ದು ಅವಶ್ಯಕತೆ ಇದ್ದರೇ ಹಾಜರುಪಡಿಸಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ., ದಾಂಡೇಲಿ